**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬ್ಯಾಡಗಿ.**

**ಓ.ಎಸ್.ನಂ. 80/2021.**

**ಪಿ ಡಬ್ಲ್ಯೂಃ 1**

**ದಿನಾಂಕಃ 30-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಯರ ಪರ ಶ್ರೀ ಸಿ.ಎನ್.ಪಿ ವಕೀಲರಿಂದಃ**

ದಿನಾಂಕಃ 02.09.2020 ರಂದು ಖರೀದಿ ಕರಾರು ಪತ್ರವನ್ನು ದಾವಾ ಸ್ವತ್ತುಗಳಿಗೆ ಸಬಂಧಿಸಿದಂತೆ ಮಾಡಿಸಿಕೊಳ್ಳುವ ಪೂರ್ವದಲ್ಲಿ ಕಾನೂನು ಅಭಿಪ್ರಾಯವನ್ನು ನಾನು ಪಡೆದುಕೊಂಡಿದ್ದೆ. ಸದರಿ ಕಾನೂನು ಅಭಿಪ್ರಾಯವನ್ನು ನಾನು ದಾವಾ ಸ್ವತ್ತಿನ ಪಹಣಿ ಪತ್ರಿಕೆ ಹಾಗೂ ಡ ಉತಾರನ್ನು ತೆಗೆಯಿಸಿ ಪಡೆದುಕೊಂಡಿದ್ದೆ. ದಾವಾ ಸ್ವತ್ತಿಗೆ ಸಂಬಂಧಿಸಿದ ಋಣಭಾರ ಪ್ರಮಾಣ ಪತ್ರವನ್ನು ತೆಗೆಯಿಸಿ ನೋಡಿರಲಿಲ್ಲ. ಸದರಿ ನಾನು ಕರಾರು ಪತ್ರವನ್ನು ದಾವಾ ಸ್ವತ್ತಿನ ಮಾಲೀಕನಲ್ಲದ ವ್ಯಕ್ತಿಯೊಂದಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ದಾವಾ ಸ್ವತ್ತು ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯೋ ಅಥವಾ ಪಿತ್ರಾರ್ಜಿತ ಆಸ್ತಿಯೋ ಎಂದು ನಾನು ತಿಳಿದುಕೊಂಡಿಲ್ಲ. ಸದರಿ ಕರಾರು ಪತ್ರಕ್ಕೆ ಪ್ರತಿವಾದಿಯ ಹೆಂಡತಿ ಹಾಗೂ ಅವರ 4 ಜನ ಹೆಣ್ಣು ಮಕ್ಕಳ ಹಾಗೂ ಓರ್ವ ಮಗನ ಒಪ್ಪಿಗೆಯನ್ನುಪಡೆದುಕೊಂಡಿದ್ದೆ.

ಪ್ರತಿವಾದಿಗೆ 2 ಜನ ಹೆಂಡತಿಯರು ಅವರೆಂದರೆ ಗೌರಮ್ಮ ಹಾಗೂ ಸಾವಿತ್ರಮ ಎಂದು ಇರುತ್ತಾರೆ. ಸದರಿ ಸಾವಿತ್ರಮ್ಮರವರಿಗೆ ಎಷ್ಟು ಜನ ಮಕ್ಕಮ ಹಾಗೂ ಗೌರಮ್ಮ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿದೆ. ಸದರಿ ಕರಾರು ಪತ್ರಕ್ಕೆ ಪ್ರತಿವಾದಿಯ ಎಲ್ಲ ಮಕ್ಕಳು ಸಹಿ ಮಾಡಿಲ್ಲ. ದಾವಾ ಸ್ವತ್ತು ಪ್ರತಿವಾದಿಯ ಪಿತ್ರಾರ್ಜಿತ

ಆಸ್ತಿ ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಯ ಮಾಲೀಕತ್ವದ್ದು ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಮಾಲೀಕ ಅಲ್ಲ ಎಂದು ನನಗೆ ಯಾವಾಗ ಗೊತ್ತಾಗಿದೆ ಎಂದರೆ ಸಾಕ್ಷಿ ಪ್ರತಿವಾದಿಯೇ ದಾವಾ ಸ್ವತ್ತಿನ ಮಾಲೀಕ ಎಂದು ಹೇಳುತ್ತಾರೆ. ಸದರಿ ಕರಾರು ಪತ್ರವನ್ನು ನಾನು ಪ್ರತಿವಾದಿಗೆ ಮೋಸ ಮಾಡಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕರಾರು ಪತ್ರಕ್ಕೆ ಪ್ರತಿವಾದಿ, ಆತನ ಹೆಂಡತಿ ಹಾಗೂ ಆತನ ಮಗಳು ಸಮ್ಮತಿ ನೀಡಿರುತ್ತಾರೆ.

ಈ ಹಂತದಲ್ಲಿ ಎರಡೂ ಕಡೆ ವಕೀಲರು ಸಾಕಷ್ಟು ಬಾರಿ ಹೇಳಿದರೂ ಸಹ ಪಾಟೀ ಸವಾಲಿನಲ್ಲಿ ಒಬ್ಬರಿಗೊಬ್ಬರು ಜಗಳವಾಡುತ್ತಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮದ್ಯಾಹ್ನ 03.00 ಗಂಟೆಗೆ ಮುಂದೂಡಲಾಗಿದೆ.

ಪ್ರಕರಣವನ್ನು ಮದ್ಯಾಹ್ನ 04.15 ರ ಸಮಯದಲ್ಲಿ ಪುನಃ ಕರೆಯಲಾಗಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**.

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.